ಹೆಚ್.ಕೆ. ವಿಜಯಕುಮಾರ್, ರಾಯಚೂರು
ಇತ್ತೀಚೆಗೆ ವೈದ್ಯರು ರೋಗಿಗಳಿಗೆ ವಿದೇಶಿ ಹಣ್ಣುಗಳನ್ನೇ ಸೇವಿಸಲು ಹೇಳುತ್ತಿರುವುದೇಕೆ?



ಹಣ್ಣು ವಿದೇಶದ್ದೇ ಚೆನ್ನ ಎಂಬ ದೇಸೀ ಭ್ರಮೆ.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ
ಒಂದು ಕೊಂಡರೆ ಮತ್ತೊಂದು ಉಚಿತ ಎನ್ನುವ ವ್ಯವಸ್ಥೆ ತರಕಾರಿ ವ್ಯಾಪಾರದಲ್ಲೇಕಿಲ್ಲ?
'ಮಡಿ', 'ಸೇರದು', 'ಅಸಿಡಿಟಿ', ಮುಂತಾದ ತಕರಾರುಗಳಿಂದ ಸಮ್ಮತ ಕಾಂಬಿನೇಷನ್ ಸಿಗದಂತೆ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಕಣ್ಣಿಗೆ ಕಾಣದ ದೇವರನ್ನು ನಂಬುವುದು ಹೇಗೆ?
ಕಣ್ಣು ಮುಚ್ಚಿಕೊಂಡು! ಒಳಗೆ ಕಾಣದ ದೈವತ್ವ ಹೊರಗಿರಲು ಸಾಧ್ಯವೇ ಇಲ್ಲ.

ಬಿ.ಆರ್. ಉಷಾ, ಬೆಂಗಳೂರು
ಹೆಣ್ಣು ಕಾಲಲ್ಲೇ ಏಕೆ ಅಕ್ಕಿಯ ಸೇರನ್ನು ಒದೆಯಬೇಕು?



ಕೈಯಲ್ಲಿ ಒದೆಯಲಾಗದಲ್ಲ!

ಜಗದೀಶ ಬಿ. ಹೊಸೂರು, ಮೈಸೂರು
ದೇಹದೆಲ್ಲ ಭಾಗಗಳ ಕೊಬ್ಬನ್ನು ಕರಗಿಸಬಹುದು; ಹೊಟ್ಟೆಯ ಕೊಬ್ಬನ್ನು ಕರಗಿಸಲೇಕೆ ಕಷ್ಟ?
ಹೊಟ್ಟೆಕೊಬ್ಬು ಬಂಡವಾಳ; ಮಿಕ್ಕೆಲ್ಲವು ಲಾಭ; ಲಾಭ ಕರಗಿದ ಮೇಲೆಯೇ ಬಂಡವಾಳಕ್ಕೆ ಕುತ್ತು.

ಅನಸೂಯ ಟಿ, ಕೇದಿಗೆಮನೆ
ಪತ್ರಿಕೆಯಲ್ಲಿ ಬರುವ ದಿನಭವಿಷ್ಯ, ವಾರಭವಿಷ್ಯಗಳನ್ನು ನಂಬುತ್ತೀರಾ ರಾಮ್?
ಅವನ್ನು ಬರೆಯುವವರ ಭವಿಷ್ಯ ಉಜ್ವಲವಾಗಿದೆ ಎಂದು ನಂಬುತ್ತೇನೆ.

ಬೂಕನಕೆರೆ ವಿಜೇಂದ್ರ, ಮೈಸೂರು
ಪ್ರಾಣಿಗಳು ಸಹ ಮೊಬೈಲ್‌ನಲ್ಲಿ ಮಾತನಾಡುತ್ತವೆಯಾ?
ಇಲ್ಲವೆನಿಸುತ್ತದೆ. ಮೊನ್ನೆ 'ಆ ಪ್ರಾಣಿ ಫೋನೇ ಎತ್ತಲ್ಲ' ಅನ್ನುತ್ತಿದ್ದನೊಬ್ಬ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಕುದಿಯುವ ನೀರಿನಲ್ಲಿ ನಮ್ಮ ಬಿಂಬ ಕಾಣುವುದಿಲ್ಲ. ಏಕೆ?
ನೀರುಗನ್ನಡಿಗೆ ಆವಿತೆರೆ ಮುತ್ತಿಕೊಂಡಿರುವುದರಿಂದ.

ಜೀವಿ, ಗೊಂಡೇದಹಳ್ಳಿ
ಹಿಂದೆ ಮರ್ಯಾದೆಯೇ ಸೌಂದರ್ಯ ಎನ್ನುತ್ತಿದ್ದರು. ಇಂದು ಸೌಂದರ್ಯವೇ ಮರ್ಯಾದೆ ಎನ್ನುವರಲ್ಲ?
ಈ ಹೇಳಿಕೆಯನ್ನು ಬ್ಯೂಟಿಷಿಯನ್‌ಗಳೇ ಹಬ್ಬಿಸಿದ್ದಂತೆ.

ರಾಜೀವ್ ಎನ್. ಮಾಗಲ್, ಸಕಲೇಶಪುರ
ನಗರಗಳಲ್ಲಿ ಬೀದಿಗೆ ನಾಲ್ಕು ಮೊಬೈಲ್ ಫೋನ್ ಶಾಪ್; ಮ್ಯಾಗಜೈನ್ ಶಾಪ್ ಕಾಣೋದೇ ಇಲ್ಲವಲ್ಲ?
ಸೆಲ್‌ಫೋನ್ ಬುಕ್ ಆಗುವಷ್ಟು ಬುಕ್ ಸೆಲ್ ಆಗಲ್ಲವಲ್ಲ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಮನಸ್ಸೆಂಬ ಕನ್ನಡಿಯು ಮನುಜನಿಗೆ ಇಲ್ಲದಿದ್ದರೆ ಏನಾಗುತ್ತಿತ್ತು ಸರ್?
ಬುದ್ಧಿಗೇ ಪ್ರಾಧಾನ್ಯ ದೊರೆತು ಮಾನವದೇಹ ಭಾವನೆಗಳ ಸುಡುಗಾಡಾಗುತ್ತಿತ್ತು.

ಮಂಡಿ ಕುಮಾರ್, ಬೆಂಗಳೂರು
ಹಿಂದಿನ ಕಾಲದ ಪ್ರಿಯತಮೆಯರಿಗೂ ಈ ಕಾಲದ ಪ್ರೇಯಸಿಗೂ ಇರುವ ವ್ಯತ್ಯಾಸ?
ಅವರ ಪ್ರೇಮಾಂಕುರ ನೆಟ್ಟನೋಟದಿಂದ; ಇವರದು ನೆಟ್ ಪ್ರೊಫೈಲಿಂದ.

ಪಿ. ಜಯವಂತ ಪೈ, ಕುಂದಾಪುರ
ಅಪ್ಪುಗೆಗೂ, ಆಲಿಂಗನಕ್ಕೂ ವ್ಯತ್ಯಾಸವೇನು?
ಅಪ್ಪುಗೆಗೆ ದಿಂಬೂ ಆಗಬಹುದು. ಆಲಿಂಗನಕ್ಕೆ ಆ ಲಿಂಗವೋ, ಈ ಲಿಂಗವೋ ಇರಬೇಕು.

**ವಾರದ ಪ್ರಶ್ನೆ**

ಮಲ್ಲಿಕಾರ್ಜುನ, ಸುರಧೇನುಪುರ,
ಅಪಘಾತಕ್ಕೆ ಅವಸರವೇ ಕಾರಣ. ಹೃದಯಾಘಾತಕ್ಕೆ?
ಎಣ್ಣೆ, ಹೆಣ್ಣೆ!

ದಿನೇಶ್, ಗುಡ್ಡದೂರು
ಡಾಕ್ಟರ್, ಲಾಯರ್, ಪೊಲೀಸ್; ಈ ಮೂವರಲ್ಲಿ ಯಾರು ಹೆಚ್ಚು ರಾಮ್?
ಅವರ ರೈಡ್, ಇವರ ನೋಟೀಸ್ ಜಾರಿಯಾದಾಗ 'ಹೃದ್ರೋಗಿ' ಎಂದು ಘೋಷಿಸಿ ಬಚಾಯಿಸುವ ಡಾಕ್ಟ್ರೇ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ಹೋಟೇಲ್ ಊಟಕ್ಕೆ ಹಣ ಬೇಕು. ಮನೆಯ ಊಟಕ್ಕೆ?
ಕೆಲವೊಮ್ಮೆಯಂತೂ ಹಣಾಹಣಿ ಆಗಬೇಕು.

ಆರ್. ಮಧುಸೂದನ್, ಹಾಸನ
ನರ್ಸ್ ಜಾತಕ, ಡಾಕ್ಟರ್ ಜಾತಕ ಬಂದಿದೆ. ಯಾರನ್ನು ಮದುವೆಯಾಗಲಿ?



ನರ್ಸನ್ನೇ ಆಗಿ; ಕೈಹಿಡಿದು ನಡೆಸಲು ಅವಳೇ ಸರಿ.

ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ
ರಾಜಕಾರಣಿಗಳಲ್ಲಿ ಬೋಳು ತಲೆಯವರು ಕಡಿಮೆ. ಯಾಕಿರಬಹುದು?
ಅವರ ಸಹವಾಸ ಮಾಡಿದವರಿಗೇ ಹೆಚ್ಚಾಗಿ ಬೋಳುತನ ಮೀಸಲಾಗುವುದರಿಂದ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ವರ್ಷಕ್ಕೊಮ್ಮೆ ಬರುವ ಮಾತಾಪಿತೃಗಳ ತಿಥಿಗೆ ಬರೀ ಗಂಡುಮಕ್ಕಳೇ ಖರ್ಚನ್ನು ಭರಿಸಬೇಕೆ?
ಈ ಯೋಚನೆ ಬಂದಾಕ್ಷಣ ಮಾತಾಪಿತೃಗಳ ಶ್ರಾದ್ಧವಾದಂತೆಯೇ. ಪಿಂಡವೊಂದೇ ಬಾಕಿ.

■ ರಾಮ್